**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು

ಸಂಖ್ಯೆ:ಕೆಪಿಆರ್‌ಸಿ/ಜಿಪಂತಾಪಂ/33/2022 ದಿನಾಂಕ: 16.02.2024

**ಇವರಿಗೆ,**
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ,
ಬೆಂಗಳೂರು ನಗರ, ದಕ್ಷಿಣ ಕನ್ನಡ, ಬೆಳಗಾವಿ,
ಚಿಕ್ಕಮಗಳೂರು, ಚಿತ್ರದುರ್ಗ, ವಿಜಯಪುರ,
ಚಾಮರಾಜನಗರ, ದಾವಣಗೆರೆ, ಧಾರವಾಡ, ಗದಗ,
ಹಾಸನ, ಹಾವೇರಿ, ಕೊಡಗು, ಕೋಲಾರ, ಮಂಡ್ಯ, ಮೈಸೂರು,
ಶಿವಮೊಗ್ಗ, ತುಮಕೂರು, ಉಡುಪಿ, ಚಿಕ್ಕಬಳ್ಳಾಪುರ,
ರಾಮನಗರ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿ.

ಮಾನ್ಯರೇ,

ವಿಷಯ: ಜಿಲ್ಲಾ / ತಾಲ್ಲೂಕು ಪಂಚಾಯಿತಿಗಳ ಪ್ರ.ದ.ಸ ಹಾಗೂ ದ್ವಿ.ದ.ಸ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮುಖೇನ ಭರ್ತಿ ಮಾಡಲು ಜಿಲ್ಲಾವಾರು ಹಂಚಿಕೆಯ ಕುರಿತು.

ಉಲ್ಲೇಖ:
1. ಆರ್ಥಿಕ ಇಲಾಖೆಯ ಸಹಮತಿ ಪತ್ರ ಸಂಖ್ಯೆ: ಆಇ 783 ವೆಚ್ಚ 06 2022 ದಿನಾಂಕ: 02.11.2023.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 79 ಕೆ.ಎಸ್.ಎಸ್ 2022 (ಇ) ಬೆಂಗಳೂರು, ದಿನಾಂಕ:24.06.2022.
3. ಸರ್ಕಾರಿ ಅಧಿಸೂಚನೆ ಸಂಖ್ಯೆ: ಮಮಇ 111 ಪಿಹೆಚ್‌ಪಿ 2022, ದಿನಾಂಕ:15.11.2023.
4. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022, ಬೆಂಗಳೂರು, ದಿನಾಂಕ:28.12.2022.
5. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2023, ಬೆಂಗಳೂರು, ದಿನಾಂಕ08.03.2023.

****

ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ನೇರ ನೇಮಕಾತಿ ಕೋಟಾದಡಿ ಗಣನೀಯ ಮಟ್ಟದಲ್ಲಿ ಲಿಪಿಕ ವೃಂದದ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಈ ಹಿಂದೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆರ್ಥಿಕ ಇಲಾಖೆಯು ಉಲ್ಲೇಖ(1)ರ ದಿನಾಂಕ: 02.11.2023ರ ಪತ್ರದಲ್ಲಿ 100 ಪ್ರ.ದ.ಸ ಹಾಗೂ 200 ದ್ವಿ.ದ.ಸ ಹುದ್ದೆಗಳನ್ನು ನೇರ ನೇಮಕಾತಿ ಮುಖೇನ ಭರ್ತಿ ಮಾಡಲು ಸಹಮತಿ ನೀಡಿದ್ದು, ಈ ಹುದ್ದೆಗಳನ್ನು ಜಿಲ್ಲಾ ಪಂಚಾಯತಿಯಲ್ಲಿ ನೇರ ನೇಮಕಾತಿ ಕೋಟಾದಡಿ ಮಂಜೂರಾದ / ಖಾಲಿ ಇರುವ ಹುದ್ದೆಗಳ ಆಧಾರದಲ್ಲಿ ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿರುತ್ತದೆ.

| **ಕ್ರ.ಸಂ** | **ಜಿಲ್ಲೆಗಳು** | **ಪ್ರ.ದ.ಸ ಹುದ್ದೆಗಳ ಹಂಚಿಕೆ** | **ದ್ವಿ.ದ.ಸ ಹುದ್ದೆಗಳ ಹಂಚಿಕೆ** |
|---|---|---|---|
| 1 | ಬಾಗಲಕೋಟೆ | 1 | 6 |
| 2 | ಬೆಂಗಳೂರು (ಗ್ರಾ) | 0 | 3 |
| 3 | ಬೆಂಗಳೂರು (ನ) | 1 | 5 |
| 4 | ದಕ್ಷಿಣ ಕನ್ನಡ | 6 | 13 |
| 5 | ಬೆಳಗಾವಿ | 1 | 4 |

| | | | |
|---|---|---|---|
| 6 | ಚಿಕ್ಕಮಗಳೂರು | 6 | 13 |
| 7 | ಚಿತ್ರದುರ್ಗ | 4 | 4 |
| 8 | ವಿಜಯಪುರ | 4 | 13 |
| 9 | ಚಾಮರಾಜನಗರ | 4 | 9 |
| 10 | ದಾವಣಗೆರೆ | 2 | 7 |
| 11 | ಧಾರವಾಡ | 1 | 7 |
| 12 | ಗದಗ | 4 | 10 |
| 13 | ಹಾಸನ | 4 | 16 |
| 14 | ಹಾವೇರಿ | 7 | 10 |
| 15 | ಕೊಡಗು | 4 | 7 |
| 16 | ಕೋಲಾರ | 4 | 6 |
| 17 | ಮಂಡ್ಯ | 4 | 9 |
| 18 | ಮೈಸೂರು | 4 | 9 |
| 19 | ಶಿವಮೊಗ್ಗ | 7 | 9 |
| 20 | ತುಮಕೂರು | 7 | 12 |
| 21 | ಉಡುಪಿ | 4 | 9 |
| 22 | ಚಿಕ್ಕಬಳ್ಳಾಪುರ | 4 | 5 |
| 23 | ರಾಮನಗರ | 6 | 3 |
| 24 | ಉತ್ತರ ಕನ್ನಡ | 11 | 11 |
| | **ಒಟ್ಟು** | **100** | **200** |

ಉಲ್ಲೇಖ 02 ರ ದಿನಾಂಕ: 13.02.2024 ರ ಆದೇಶದಲ್ಲಿ ತಿಳಿಸಿರುವಂತೆ ಜಿಲ್ಲಾ/ತಾಲ್ಲೂಕು ಲಿಪಿಕ ವೃಂದದ ಹುದ್ದೆಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೇಮಕಾತಿ ಹಾಗೂ ಶಿಸ್ತು ಪ್ರಾಧಿಕಾರಿಯಾಗಿದ್ದು, ಮೇಲೆ ತಿಳಿಸಿರುವ ಪ್ರ.ದ.ಸ ಹಾಗೂ ದ್ವಿ.ದ.ಸ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ online ಪ್ರಸ್ತಾವನೆ ಸಲ್ಲಿಕೆಯ ಕುರಿತಂತೆ ದಿನಾಂಕ: 09.02.2024 ರಂದು ಆಯುಕ್ತಾಲಯದಲ್ಲಿ ಆಯೋಜಿಸಲಾಗಿದ್ದ ಕಾರ್ಯಗಾರದಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಲಾಗಿರುತ್ತದೆ.

ಉಲ್ಲೇಖ (03) ರ ದಿನಾಂಕ: 15.11.2023 ರ ಅಧಿಸೂಚನೆಯಲ್ಲಿ ಸಾಮಾನ್ಯ ಹುದ್ದೆಗಳಿಗೆ ಗುರುತಿಸಿರುವ ವಿಕಲಚೇತನ ಮೀಸಲಾತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಿಗೆ ಸಂಯೋಜಿಸುವಂತೆ ಹಾಗೂ ಉಲ್ಲೇಖ (04) ಮತ್ತು (05) ರ ಆದೇಶಗಳನ್ವಯ ಮೇಲಿನ ಪ್ರ.ದ.ಸ ಹಾಗೂ ದ್ವಿ.ದ.ಸ ಹುದ್ದೆಗಳಿಗೆ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಗುರುತಿಸಿ, ಸ್ಪರ್ಧಾತ್ಮಕ ಪರೀಕ್ಷೆಯ ಮುಖೇನ ಸದರಿ ಹುದ್ದೆಗಳನ್ನು ಭರ್ತಿ ಮಾಡಲು online ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲು ಕೂಡಲೇ ಅಗತ್ಯ ಕ್ರಮ ಕೈಗೊಂಡು, 15 ದಿನದೊಳಗಾಗಿ ಅನುಪಾಲನ ವರದಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ